**Crl. Misc. No. 6/2025** **PW - 1**

ಪ್ರಮಾಣೀಕರಿಸಲಾದ ದಿನಾಂಕಃ **10.12.2025.**

ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀಮತಿ ಸಿ. ಬಿ. ಎ ವಕೀಲರಿಂದಃ

ಜೊತೆಯಲ್ಲಿದ್ದಾಗ ನನ್ನ ಗಂಡನ ಹೆಸರಿನಲ್ಲಿ 11 ಎಕರೆ ಕಾಫಿ ತೋಟವಿದ್ದು ನಾನು ನನ್ನ ಮಗ ಮನೆಯಿಂದ ಆಚೆ ಬಂದ ನಂತರ ನನ್ನ ಗಂಡ ಅಕ್ಕನ ಹೆಸರಿನಲ್ಲಿ ಕಾಫಿ ತೋಟ ವಿಭಾಗಮಾಡಿಕೊಂಡು 5 ವರೆ ಎಕರೆ ನನ್ನ ಗಂಡನ ಹೆಸರಿನಲ್ಲಿರುತ್ತದೆ. ಏಪ್ರಿಲ್ 2024 ರಿಂದ ನಾನು ಮತ್ತು ನನ್ನ ಮಗ ನನ್ನ ತಾಯಿಯ ಮನೆಯಲ್ಲಿದ್ದೇವೆ. ಮನೆಯಿಂದ ಆಚೆ ಬಂದ ನಂತರ ನನ್ನ ಮಗನ ಖರ್ಚು ವೆಚ್ಚಗಳನ್ನು ಎದುರುದಾರರು ನೋಡುತ್ತಿಲ್ಲ. ನನ್ನ ಮಗ ಈಗ 1 ನೇ ತರಗತಿ Roots ಶಾಲೆಯಲ್ಲಿ ಓದುತ್ತಿದ್ದಾನೆ, ವರ್ಷಕ್ಕೆರೂ. 50 ಸಾವಿರ ಖರ್ಚಿದೆ. ನನ್ನ ಮಗನಿಗೆ ಬೇರೆ ಖರ್ಚುಗಳು ಅಂದರೆ ಆತನ ಪಾಲನೆ, ಪೋಷಣೆಗೆ ತಿಂಗಳಿಗೆ 30 ಸಾವಿರ ಹಣ ಬೇಕು. ನನ್ನ ಗಂಡ ವ್ಯವಸಾಯ ಮಾಡುತ್ತಿದ್ದು ವಾರ್ಷಿಕವಾಗಿ ಕಾಫಿ ಯಿಂದ ರೂ. 50 ಲಕ್ಷ ಹಣ ಬರುತ್ತದೆ.

ಶಾಲೆಗೆ ಹಣ ಕಟ್ಟಿದ ರಶೀದಿಗಳು ಕಳೆದುಹೋಗಿದ್ದು ಶಾಲೆ ಕಡೆಯಿಂದ ಅವುಗಳ ದೃಡೀಕೃತ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆದ್ದರಿಂದ ಅವುಗಳನ್ನು ನಿ ಪಿ 1 ಮತ್ತು 2 ಎಂದು ಗುರುತಿಸಲಾಯಿತು. ಆರ್ ಟಿ ಸಿ ಗಳನ್ನು ನಿ ಪಿ 3 ರಿಂದ 7 ಎಂದು ಗುರುತಿಸಲಾಯಿತು. ರಶೀದಿಗಳನ್ನು ನಿ ಪಿ 8 ರಿಂದ 10 ಎಂದು ಗುರುತಿಸಲಾಯಿತು. ನಾನು ನನ್ನ ಗಂಡನ ಕುಡಿಯುವ ಚಟವನ್ನು ಬಿಡಿಸಲು ಸೇರಿಸಿದ ದಾಖಲೆಗಳನ್ನು ನಿ ಪಿ 11 ಮತ್ತು 12 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ